ಈ) ಯೋಜನೆಗಳನ್ನು ಕಾರ್ಯಗತಗೊಳಿಸುವಲ್ಲಿ ಈಗಾಗಲೇ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ರಾಜ್ಯದಲ್ಲಿರುವ ಪಟೇಲರಿಗೆ ಮಾಸಾಶನ

353 (1059): ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪಟೇಲರಿಗೆ ಮಾಸಾಶನ ನೀಡಲಾಗುತ್ತಿದೆಯೇ ?

ಆ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನು ?

ಇ) ಶ್ಯಾನುಭೋಗರಿಗೆ ಮಾಸಾಶನ ನೀಡಿ ಪಟೇಲರುಗಳಿಗೆ ನೀಡದೆ ಇರುವುದು ತಾರತಮ್ಯ ಅಲ್ಲವೇ ?

ಈ) ಪಟೇಲರಿಗೆ ಮಾಸಾಶನ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

ಉ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಜನ ಪಟೇಲರಿದ್ದಾರೆ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಮಂತ್ರಿಗಳು):–

ಅ) ಹೌದು. ದಿನಾಂಕ 15–8–84ರಿಂದ ಮಾಸಿಕ 100.00 ರೂ.ಗಳ ಅನುಕಂಪ ಭತ್ಯೆ ನೀಡಲಾಗುತ್ತಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉಭಯತ್ರಯರಿಗೂ ನೀಡಲಾಗುತ್ತಿದೆ. ಆದರೆ ಮಾಜಿ ಶ್ಯಾನುಭೋಗರಿಗೆ ದಿನಾಂಕ 1–7–90 ರಿಂದ ಮಾಸಿಕ 500.00 ರೂ.ಗಳ ಅಡ್‌ಹಾಕ್ ಪಿಂಚಣಿಯನ್ನು ಮಾಜಿ ಪಟೇಲರುಗಳಿಗೆ ದಿನಾಂಕ 15–8–84ರಿಂದ ಮಾಸಿಕ ರೂ. 100.00 ಅನುಕಂಪ ಭತ್ಯೆಯನ್ನು ನೀಡಲಾಗುತ್ತಿದೆ.

ಈ) ಪರಿಶೀಲಿಸಲಾಗುತ್ತಿದೆ.

ಉ) 40

ರಾಜ್ಯದಲ್ಲಿ ಸಣ್ಣ ನೀರು ಸರಬರಾಜು ಯೋಜನೆಗಳನ್ನು ಪೂರ್ಣಗೊಳಿಸಿದ ಗ್ರಾಮಗಳ ಸಂಖ್ಯೆ

354 (1056): ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ)

ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಎಷ್ಟು ಗ್ರಾಮಗಳಲ್ಲಿ ಸಣ್ಣನೀರು; ಸರಬರಾಜು ಯೋಜನೆಯನ್ನು ಕಾರ್ಯಗತಗೊಳಿಸಲಾಗಿದೆ ?

ಆ) ಇನ್ನು ಎಷ್ಟು ಗ್ರಾಮಗಳಿಗೆ ಸಣ್ಣ ನೀರು ಸರಬರಾಜು ಯೋಜನೆಗಳನ್ನು ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ ?

ಇ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಗ್ರಾಮಗಳಿಗೆ ಈ ಯೋಜನೆಯನ್ನು ಒದಗಿಸಲಾಗಿದೆ ಮತ್ತು ಎಷ್ಟು ಗ್ರಾಮಗಳಿಗೆ ಒದಗಿಸಲು ಉದ್ದೇಶಿಸಲಾಗಿದೆ ?

ಈ) ಮಾಗಡಿ ತಾಲ್ಲೂಕಿನಲ್ಲಿ ಕೆಲವು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ ಇದನ್ನು ಪರಿಗಣಿಸಲು ಸರ್ಕಾರದ ಕ್ರಮಗಳೇನು ?

ಶ್ರೀ ಎಂ. ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):-

ಅ) 5263 (31-3-92 ರವರೆಗೆ)

ಆ) 670 (1992-93)

ಇ) 1) 54

2) 1992 – 93 ರ ಸಾಲಿನಲ್ಲಿ 23 ಗ್ರಾಮಗಳಲ್ಲಿ ಸಣ್ಣ ನೀರು ಸರಬರಾಜು ಯೋಜನೆಯನ್ನು ಒದಗಿಸಲು ಉದ್ದೇಶಿಸಲಾಗಿದೆ.

ಈ) ಹೌದು

ಉ) ಸಮಸ್ಯಾತ್ಮಕ ಗ್ರಾಮಗಳನ್ನು ಗುರುತಿಸಲಾಗುತ್ತಿದೆ ಮತ್ತು ಆ ಗ್ರಾಮಗಳಲ್ಲಿ ಕುಡಿಯುವ ನೀರು ಸರಬರಾಜನ್ನು ಮುಂದಿನ ಎರಡು ವರ್ಷಗಳಲ್ಲಿ ಉತ್ತಮಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿರುವ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತನೆ

355 (1057): ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ತಾಂಡಾಗಳ ಸಂಖ್ಯೆ ಎಷ್ಟು ?

ಆ) ಈ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗುವುದೇ ?

ಇ) ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವಾಗ ಅನುಸರಿಸುವ ಕ್ರಮಗಳೇನು ?

ಈ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ತಾಂಡಾಗಳಿವೆ ಹಾಗೂ ಅವುಗಳನ್ನು ಯಾವಾಗ ಕಂದಾಯ ಗ್ರಾಮಗಳೆಂದು ಪರಿವರ್ತಿಸಲಾಗುವುದು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):

ಅ) 1,365

ಆ) ಹೌದು.

ಇ) ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ – 3 ರ ಪ್ರಕಾರ ನಿಗದಿಪಡಿಸಿರುವ ಜನಸಂಖ್ಯೆ, ವಿಸ್ತೀರ್ಣ ಕಂದಾಯ ಬಾಕಿ ಆಡಳಿತ ಅನುಕೂಲತೆ, ಇವುಗಳ ಆಧಾರದ ಮೇಲೆ.